**Proposed amended Rules 13, 14 and 17 of Chapter XII of High Court of Karnataka Rules, 1959, in English and Kannada version.**

ಪ್ರಸ್ತಾವಿತ ತಿದ್ದುಪಡಿ ಮಾಡಿದ ನಿಯಮಗಳು **13, 14** ಮತ್ತು **17** ನೇ ಅಧ್ಯಾಯ ಕರ್ನಾಟಕ ನಿಯಮಗಳ ಹನ್ನೆರಡನೇ**, 1959,** ಇಂಗ್ಲಿಷ್ ಮತ್ತು ಕನ್ನಡ ಆವೃತ್ತಿಯಲ್ಲಿ.

| | |
|---|---|
| **I. Rule 13 is to be substituted as under:** | I. ನಿಯಮ 13 ಅನ್ನು ಈ ಕೆಳಗಿನಂತೆ ಬದಲಾಯಿಸಲಾಗಿದೆ: |
| 13 (1) At the time of filing, the Party/ies-in-Person or the advocate filing papers shall certify that the filing is made properly and complies with all the requirements of the Checklist for that particular classification of matter, which Checklist is webhosted on the website of the High Court of Karnataka. | 13 (1) ಕಾಗದಪತ್ರಗಳನ್ನು ಸಲ್ಲಿಸುವ ಸಮಯದಲ್ಲಿ, ಖುದ್ದು ಹಾಜರಾಗುವ ಪಕ್ಷಕಾರರು ಅಥವಾ ಕಾಗದಪತ್ರಗಳನ್ನು ಸಲ್ಲಿಸುವ ವಕೀಲರು, ಈ ಸಲ್ಲಿಕೆಯನ್ನು ಸರಿಯಾಗಿ ಮಾಡಲಾಗಿದೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗಿರುವ ನಿರ್ದಿಷ್ಟ ಪ್ರಕರಣದ ವರ್ಗೀಕರಣಕ್ಕೆ ಸಂಬಂಧಿಸಿದ ಪರಿಶೀಲನಾಪಟ್ಟಿಯ (Checklist) ಎಲ್ಲಾ ಅವಶ್ಯಕತೆಗಳನ್ನು ಪೂರೈಸುತ್ತದೆ ಎಂದು ದೃಢೀಕರಿಸಬೇಕು. |
| (2) The Party/ies-in-Person or the advocate filing papers shall tick mark each of the requirements (Yes or No) in the concerned box indicating compliance or not, and if not complied, the reason for non-compliance and the submission of the counsel seeking waiver or exemption from compliance. The filled-in Compliance list and certificate shall be filed along with the papers filed. | (2) ಕಾಗದಪತ್ರಗಳನ್ನು ಸಲ್ಲಿಸುವ ಖುದ್ದು ಹಾಜರಾಗುವ ಪಕ್ಷಕಾರರು ಅಥವಾ ವಕೀಲರು, ಸಂಬಂಧಿತ ಬಾಕ್ಸ್‌ನಲ್ಲಿ ಅನುಸರಣೆಯನ್ನು ಸೂಚಿಸಲು ಪ್ರತಿಯೊಂದು ಅವಶ್ಯಕತೆಗಳಿಗೂ (ಹೌದು ಅಥವಾ ಇಲ್ಲ) ಸರಿ ಗುರುತು ಮಾಡಬೇಕು, ಮತ್ತು ಅನುಸರಿಸದಿದ್ದಲ್ಲಿ, ಅನುಸರಿಸದಿರುವುದಕ್ಕೆ ಕಾರಣವನ್ನು ಮತ್ತು ಅನುಸರಣೆಯಿಂದ ಮನ್ನಾ ಅಥವಾ ವಿನಾಯಿತಿಯನ್ನು ಕೋರುವ ವಕೀಲರ ಸಲ್ಲಿಕೆಯನ್ನು ನಮೂದಿಸಬೇಕು. ಭರ್ತಿ ಮಾಡಿದ ಅನುಸರಣಾ ಪಟ್ಟಿ ಮತ್ತು ಪ್ರಮಾಣಪತ್ರವನ್ನು ಸಲ್ಲಿಸುವ ಕಾಗದಪತ್ರಗಳೊಂದಿಗೆ ಸಲ್ಲಿಸಬೇಕು. |
| (3) At the time of filing of papers, the e-mail address and mobile phone number of all the Party/ies, Parties-in-Person, as well as the advocate/s who has/ve filed the papers shall be furnished, which shall be treated as the registered e-mail id and mobile phone number. | (3) ಕಾಗದಪತ್ರಗಳನ್ನು ಸಲ್ಲಿಸುವ ಸಮಯದಲ್ಲಿ, ಕಾಗದಪತ್ರಗಳನ್ನು ಸಲ್ಲಿಸಿದ ಎಲ್ಲಾ ಕಕ್ಷಿದಾರರು, ಖುದ್ದು ಹಾಜರಾಗುವ ಕಕ್ಷಿದಾರರು ಹಾಗೂ ವಕೀಲರ/ವಕೀಲರುಗಳ ಇ-ಮೇಲ್ ವಿಳಾಸ ಮತ್ತು ಮೊಬೈಲ್ ಫೋನ್ ಸಂಖ್ಯೆಯನ್ನು ಒದಗಿಸಬೇಕು, ಅದನ್ನು ನೋಂದಾಯಿತ ಇ-ಮೇಲ್ ಐಡಿ ಮತ್ತು ಮೊಬೈಲ್ ಫೋನ್ ಸಂಖ್ಯೆ ಎಂದು ಪರಿಗಣಿಸಲಾಗುವುದು. |

| | |
|---|---|
| (4) The Registrar(Judicial) and Registrar (Computers) shall ensure that the compliance list with respect to each nature and or classification of filing is available on the website of the High Court, and any changes required in the compliance list shall be updated on the website at the earliest. | (4) ರಿಜಿಸ್ಟ್ರಾರ್ (ನ್ಯಾಯಾಂಗ) ಮತ್ತು ರಿಜಿಸ್ಟ್ರಾರ್ (ಗಣಕಯಂತ್ರ) ಅವರು ಪ್ರತಿ ಸಲ್ಲಿಕೆಯ ಸ್ವರೂಪ ಮತ್ತು/ಅಥವಾ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಅನುಸರಣಾ ಪಟ್ಟಿಯು ಉಚ್ಚ ನ್ಯಾಯಾಲಯದ ಜಾಲತಾಣದಲ್ಲಿ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳಬೇಕು, ಮತ್ತು ಅನುಸರಣಾ ಪಟ್ಟಿಯಲ್ಲಿ ಅಗತ್ಯವಿರುವ ಯಾವುದೇ ಬದಲಾವಣೆಗಳನ್ನು ಶೀಘ್ರದಲ್ಲಿ ಜಾಲತಾಣದಲ್ಲಿ ನವೀಕರಿಸಬೇಕು. |
| (5) Irrespective of the certificate or compliance list filed, every set of papers presented shall be examined in full, and an examination report with respect to all the papers submitted shall be prepared detailing the nature of compliances to be made as also defects pointed out and objections raised within **two (2)** working days of filing. | (5) ಸಲ್ಲಿಸಿದ ಪ್ರಮಾಣಪತ್ರ ಅಥವಾ ಅನುಸರಣಾ ಪಟ್ಟಿಯನ್ನು ಪರಿಗಣಿಸದೆ ಸಲ್ಲಿಸಿದ ಪ್ರತಿಯೊಂದು ಕಾಗದಪತ್ರಗಳ ಗುಂಪನ್ನು ಪರೀಕ್ಷಕರು ಸಂಪೂರ್ಣವಾಗಿ ಪರಿಶೀಲಿಸಬೇಕು ಮತ್ತು ಸಲ್ಲಿಸಿದ ಎಲ್ಲಾ ಕಾಗದಪತ್ರಗಳಿಗೆ ಸಂಬಂಧಿಸಿದಂತೆ ಮಾಡಬೇಕಾದ ಅನುಸರಣೆಗಳ ಸ್ವರೂಪವನ್ನು, ಹಾಗೆಯೇ ಸೂಚಿಸಲಾದ ದೋಷಗಳು ಮತ್ತು ಗುರುತಿಸಲಾದ ಆಕ್ಷೇಪಣೆಗಳನ್ನು ವಿವರಿಸುವ ಪರಿಶೀಲನಾ ವರದಿಯನ್ನು ಕಾಗದಪತ್ರಗಳನ್ನು ಸಲ್ಲಿಸಿದ ಎರಡು (2) ಕೆಲಸದ ದಿನಗಳೊಳಗೆ ಸಿದ್ಧಪಡಿಸಬೇಕು. |
| **II. Rule 14 is to be substituted as under:** | II. ನಿಯಮ 14 ಅನ್ನು ಈ ಕೆಳಗಿನಂತೆ ಬದಲಾಯಿಸಲಾಗಿದೆ: |
| "14. (1) The Registrar of this Court nominated by the Chief Justice shall, if all the papers are in order – there being no defects or waiver/exemption from any defect is sought for, direct that the appeal, petition or other matter, including but not limited to all interlocutory applications filed, be admitted to register, numbered and posted before the Court at the | "14. (1) ಮುಖ್ಯ ನ್ಯಾಯಮೂರ್ತಿಗಳಿಂದ ನಾಮನಿರ್ದೇಶನಗೊಂಡ ಈ ನ್ಯಾಯಾಲಯದ ರಿಜಿಸ್ಟ್ರಾರ್ ಅವರು, ಎಲ್ಲಾ ಕಾಗದಪತ್ರಗಳು ಕ್ರಮಬದ್ಧವಾಗಿದ್ದರೆ – ಅಂದರೆ ಯಾವುದೇ ದೋಷಗಳಿಲ್ಲದಿದ್ದರೆ ಅಥವಾ ಯಾವುದೇ ದೋಷದಿಂದ ಮನ್ನಾ/ವಿನಾಯಿತಿಯನ್ನು ಕೋರಿದ್ದರೆ, ಮೇಲ್ಮನವಿ, ಅರ್ಜಿ ಅಥವಾ ಇತರ ಪ್ರಕರಣವನ್ನು, ಸಲ್ಲಿಸಿದ ಎಲ್ಲಾ ಮಧ್ಯಂತರ ಅರ್ಜಿಗಳನ್ನು ಒಳಗೊಂಡಂತೆ ಆದರೆ ಅವುಗಳಿಗೆ ಸೀಮಿತವಾಗದೆ, ನೋಂದಣಿಗೆ ಸ್ವೀಕರಿಸಲು, ಸಂಖ್ಯೆಯನ್ನು ನೀಡಲು ಅತಿ |

| | |
|---|---|
| earliest in any event not later than **three (3)** days from the date of filing. | ಶೀಘ್ರದಲ್ಲಿ, ಯಾವುದೇ ಸಂದರ್ಭದಲ್ಲಿ ಸಲ್ಲಿಸಿದ ದಿನಾಂಕದಿಂದ ಮೂರು (3) ದಿನಗಳಿಗಿಂತ ತಡವಾಗದಂತೆ ನ್ಯಾಯಾಲಯದ ಮುಂದೆ ಹಾಜರುಪಡಿಸಲು ನಿರ್ದೇಶಿಸಬೇಕು. |
| (2) Defects or objections shall be raised on any filing within **three (3)** working days of filing, and a list thereof shall be simultaneously published on the official website of the High Court with a date and time stamp under the sub-heading **"scrutiny objections"**, under the heading **"case status"** of that particular case. | (2) ಯಾವುದೇ ಸಲ್ಲಿಕೆಯನ್ನು ಸಲ್ಲಿಸಿದ ಮೂರು (3) ಕೆಲಸದ ದಿನಗಳೊಳಗೆ ಅದರ ಬಗ್ಗೆ ಇರಬಹುದಾದ ದೋಷಗಳು ಅಥವಾ ಆಕ್ಷೇಪಣೆಗಳನ್ನು ಕಛೇರಿಯು ಗುರುತಿಸಬೇಕು, ಮತ್ತು ಅವುಗಳ ಪಟ್ಟಿಯನ್ನು ಏಕಕಾಲದಲ್ಲಿ ಉಚ್ಚ ನ್ಯಾಯಾಲಯದ ಅಧಿಕೃತ ಜಾಲತಾಣದಲ್ಲಿ, ನಿರ್ದಿಷ್ಟ ಪ್ರಕರಣದ "ಪ್ರಕರಣದ ವಸ್ತುಸ್ಥಿತಿ" ಎಂಬ ಶೀರ್ಷಿಕೆಯಡಿಯಲ್ಲಿ, "ಪರಿಶೀಲನಾ ಆಕ್ಷೇಪಣೆಗಳು" ಎಂಬ ಉಪ-ಶೀರ್ಷಿಕೆಯೊಂದಿಗೆ ದಿನಾಂಕ ಮತ್ತು ಸಮಯದ ಮುದ್ರೆಯೊಂದಿಗೆ ಪ್ರಕಟಿಸಬೇಕು |
| (3) The list of defects/objections shall, simultaneous with the uploading of the defects/objections on the official website of the High Court be sent by electronic mail (e-mail) and Short Messaging Service (SMS), enclosing the Uniform Resource Locator (URL) of the location where the defects/objections are uploaded to the registered E-mail ID and Mobile Phone number of all the Parties, Parties-in-Person as well as the advocate/s who has/ve filed the papers. | (3) ದೋಷಗಳ/ಆಕ್ಷೇಪಣೆಗಳ ಪಟ್ಟಿಯನ್ನು, ಉಚ್ಚ ನ್ಯಾಯಾಲಯದ ಅಧಿಕೃತ ಜಾಲತಾಣದಲ್ಲಿ ದೋಷಗಳು/ಆಕ್ಷೇಪಣೆಗಳನ್ನು ಅಪ್ ಲೋಡ್ ಮಾಡುವುದರೊಂದಿಗೆ ಏಕಕಾಲದಲ್ಲಿ, ದೋಷಗಳು/ಆಕ್ಷೇಪಣೆಗಳನ್ನು ಅಪ್ ಲೋಡ್ ಮಾಡಲಾದ ಸ್ಥಳದ ಏಕರೂಪ ಸಂಪನ್ಮೂಲ ಪತ್ತೆಕಾರಕವನ್ನು (URL) ಲಗತ್ತಿಸಿ, ಕಾಗದಪತ್ರಗಳನ್ನು ಸಲ್ಲಿಸಿದ ಎಲ್ಲಾ ಕಕ್ಷಿದಾರರು, ಖುದ್ದು ಹಾಜರಾಗುವ ಪಕ್ಷಕಾರರು ಹಾಗೂ ವಕೀಲರ/ವಕೀಲರುಗಳ ನೋಂದಾಯಿತ ಇ-ಮೇಲ್ ಐಡಿ ಮತ್ತು ಮೊಬೈಲ್ ಫೋನ್ ಸಂಖ್ಯೆಗೆ ಇ-ಮೇಲ್ (ವಿದ್ಯುನ್ಮಾನ ಅಂಚೆ) ಮತ್ತು ಕಿರು ಸಂದೇಶ ಸೇವೆ (SMS) ಮೂಲಕ ಕಳುಹಿಸಬೇಕು. |
| (4) Simultaneous with the notification of defects/objections, the scrutiny branch shall send the file to the compliance section to enable the Party or the Advocate presenting the papers to comply with the defects/objections raised. | (4) ದೋಷಗಳು/ಆಕ್ಷೇಪಣೆಗಳ ಅಧಿಸೂಚನೆಯೊಂದಿಗೆ ಏಕಕಾಲದಲ್ಲಿ, ಪರಿಶೀಲನಾ ಶಾಖೆಯು, ಕಾಗದಪತ್ರಗಳನ್ನು ಪ್ರಸ್ತುತಪಡಿಸುವ ಕಕ್ಷಿದಾರ ಅಥವಾ ವಕೀಲರಿಗೆ ಎತ್ತಲಾದ ದೋಷಗಳು/ಆಕ್ಷೇಪಣೆಗಳನ್ನು ಸರಿಪಡಿಸಲು ಸಾಧ್ಯವಾಗುವಂತೆ ಮಾಡಲು ಕಡತವನ್ನು ಅನುಸರಣಾ ವಿಭಾಗಕ್ಕೆ ಕಳುಹಿಸಬೇಕು. |

| | |
|---|---|
| (5) The defects/objections shall be rectified/complied with by the Party/ies-in-Person or the Advocate presenting the papers within **one** (1) week from the date they are uploaded to the website. | (5) ಕಾಗದಪತ್ರಗಳನ್ನು ಪ್ರಸ್ತುತಪಡಿಸುವ ಖುದ್ದು ಹಾಜರಾಗುವ ಪಕ್ಷಕಾರರು ಅಥವಾ ವಕೀಲರು, ದೋಷಗಳನ್ನು/ ಆಕ್ಷೇಪಣೆಗಳನ್ನು ಜಾಲತಾಣಕ್ಕೆ ಅಪ್ ಲೋಡ್ ಮಾಡಿದ ದಿನಾಂಕದಿಂದ ಒಂದು (1) ವಾರದೊಳಗೆ ಸರಿಪಡಿಸಬೇಕು/ಅನುಸರಿಸಬೇಕು.. |
| (6) Since all the defects/objections are deemed to be to the knowledge of the Party/ies-in-Person or the advocate filing papers, the said Party/ies-in-Person or the advocate filing papers shall come fully prepared to comply with all the defects/objections already raised and shall ensure that piecemeal compliance is not done. | (6) ಎಲ್ಲಾ ದೋಷಗಳು/ಆಕ್ಷೇಪಣೆಗಳು ಕಾಗದಪತ್ರಗಳನ್ನು ಸಲ್ಲಿಸುವ ಖುದ್ದು ಹಾಜರಾಗುವ ಪಕ್ಷಕಾರರು ಅಥವಾ ವಕೀಲರಿಗೆ ತಿಳಿದಿದೆ ಎಂದು ಭಾವಿಸಲಾಗುವುದರಿಂದ, ಸದರಿ ಕಾಗದಪತ್ರಗಳನ್ನು ಸಲ್ಲಿಸುವ ಖುದ್ದು ಹಾಜರಾಗುವ ಪಕ್ಷಕಾರರು ಅಥವಾ ವಕೀಲರು ಈಗಾಗಲೇ ಎತ್ತಲಾದ ಎಲ್ಲಾ ದೋಷಗಳು/ಆಕ್ಷೇಪಣೆಗಳನ್ನು ಅನುಸರಿಸಲು/ಸರಿಪಡಿಸಲು ಸಂಪೂರ್ಣವಾಗಿ ಸಿದ್ಧರಾಗಿ ಬರಬೇಕು ಮತ್ತು ಭಾಗಶ: ಹಲವು ಬಾರಿ ಅನುಸರಣೆ ಮಾಡುತ್ತಿಲ್ಲವೆಂದು ಖಚಿತಪಡಿಸಿಕೊಳ್ಳಬೇಕು. |
| (7) If compliance with all defects/objections is made and/or waiver/exemption of some of the defects/objection is sought for, and there being no further defect raised on the compliance made, the file or application shall be listed before the Court the very next working day on which the compliance is made or waiver/exemption is sought for. | (7) ಎಲ್ಲಾ ದೋಷಗಳ/ಆಕ್ಷೇಪಣೆಗಳ ಅನುಸರಣೆ ಮಾಡಿದ್ದರೆ/ ಸರಿಪಡಿಸಿದ್ದಲ್ಲಿ ಮತ್ತು/ಅಥವಾ ಕೆಲವು ದೋಷಗಳ/ ಆಕ್ಷೇಪಣೆಗಳ ಮನ್ನಾ/ವಿನಾಯಿತಿಯನ್ನು ಕೋರಿದ್ದರೆ, ಮತ್ತು ಮಾಡಿದ ಅನುಸರಣೆಯ ಮೇಲೆ ಯಾವುದೇ ಹೆಚ್ಚಿನ ದೋಷವನ್ನು ಪ್ರಸ್ತಾಪಿಸದಿದ್ದರೆ, ಕಡತ ಅಥವಾ ಅರ್ಜಿಯನ್ನು ಅನುಸರಣೆ ಮಾಡಿದ ಅಥವಾ ಮನ್ನಾ/ವಿನಾಯಿತಿ ಕೋರಿದ ತದನಂತರದ ಕೆಲಸದ ದಿನದಂದೇ ನ್ಯಾಯಾಲಯದ ಮುಂದೆ ಪಟ್ಟಿ ಮಾಡಬೇಕು. |
| (8) If rectification/compliance is not made or waiver/exemption is not sought within **one (1) week** of filing, the matter shall immediately, on the next working day after the expiry of the said period of one week, be | (8) ಸಲ್ಲಿಸಿದ ಒಂದು (1) ವಾರದೊಳಗೆ ದೋಷಗಳು/ಆಕ್ಷೇಪಣೆಗಳನ್ನು ಸರಿಪಡಿಸದಿದ್ದರೆ/ಅನುಸರಿಸದಿದ್ದರೆ ಅಥವಾ ಮನ್ನಾ/ವಿನಾಯಿತಿಯನ್ನು ಕೋರದಿದ್ದರೆ, ಪ್ರಕರಣವನ್ನು ತಕ್ಷಣವೇ, ಸದರಿ ಒಂದು ವಾರದ ಅವಧಿ ಮುಗಿದ ನಂತರದ ಕೆಲಸದ ದಿನದಂದು, ನಾಮನಿರ್ದೇಶಿತ ರಿಜಿಸ್ಟ್ರಾರ್ ಮುಂದೆ ಪಟ್ಟಿ ಮಾಡಬೇಕು (ಪಟ್ಟಿಯ |

| | |
|---|---|
| listed before the nominated Registrar (Causelist being published in that regard the previous day of listing), when the Party/ies-in-Person or the Advocate presenting the papers may seek condonation/waiver of the defects/objections. | ದಿನಾಂಕದ ಹಿಂದಿನ ದಿನ ಆ ಕಡತಗಳ/ಪ್ರಕರಣಗಳ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ), ಆಗ ಕಾಗದಪತ್ರಗಳನ್ನು ಪ್ರಸ್ತುತಪಡಿಸುವ ಖುದ್ದು ಹಾಜರಾಗುವ ಪಕ್ಷಕಾರರು ಅಥವಾ ವಕೀಲರು ದೋಷಗಳ/ಆಕ್ಷೇಪಣೆಗಳ ಮನ್ನಾ/ ವಿನಾಯಿತಿಯನ್ನು ಕೋರಬಹುದು.” |
| (9) The nominated Registrar shall have the power to condone/waive the defects/objections by way of a reasoned order; on such condonation/waiver of defects/objections, there being no other defect/objection remaining to be complied, the matter shall be listed before the concerned Court, within **two** (2) working days of such condonation/waiver. The nominated Registrar shall, however, not have the power to waive or condone defects/objections regarding payment of court fees, non-joinder or misjoinder of parties or maintainability of the case. | (9) ನಾಮನಿರ್ದೇಶಿತ ರಿಜಿಸ್ಟ್ರಾರ್‌ರವರು ಕಾರಣನೀಡಿ ಆದೇಶವನ್ನು ಮಾಡುವ ಮೂಲಕ ದೋಷಗಳನ್ನು/ಆಕ್ಷೇಪಣೆಗಳನ್ನು ಮನ್ನಾ ಮಾಡಲು/ತೆಗೆದುಹಾಕಲು ಅಧಿಕಾರವನ್ನು ಹೊಂದಿರುತ್ತಾರೆ; ಅಂತಹ ದೋಷಗಳ/ಆಕ್ಷೇಪಣೆಗಳ ಮನ್ನಾ/ತೆಗೆದುಹಾಕುವಿಕೆಯ ನಂತರ, ಪಾಲಿಸಬೇಕಾದ ಬೇರೆ ಯಾವುದೇ ದೋಷ/ಆಕ್ಷೇಪಣೆ ಉಳಿದಿಲ್ಲದಿದ್ದರೆ, ಅಂತಹ ಮನ್ನಾ/ತೆಗೆದುಹಾಕುವಿಕೆಯ ಎರಡು (2) ಕೆಲಸದ ದಿನಗಳೊಳಗೆ ಸಂಬಂಧಪಟ್ಟ ನ್ಯಾಯಾಲಯದ ಮುಂದೆ ಪ್ರಕರಣವನ್ನು ಪಟ್ಟಿ ಮಾಡತಕ್ಕದ್ದು. ಆದಾಗ್ಯೂ, ನಾಮನಿರ್ದೇಶಿತ ರಿಜಿಸ್ಟ್ರಾರ್ ರವರು ನ್ಯಾಯಾಲಯದ ಶುಲ್ಕಗಳ ಪಾವತಿ, ಪಕ್ಷಕಾರರನ್ನು ಸೇರಿಸದಿರುವುದು ಅಥವಾ ತಪ್ಪಾಗಿ ಸೇರಿಸುವುದು ಅಥವಾ ಪ್ರಕರಣದ ನಿರ್ವಹಣಾರ್ಹತೆಗೆ (ಮೈಂಟೆನೆಬಿಲಿಟಿ) ಸಂಬಂಧಿಸಿದ ದೋಷಗಳನ್ನು/ ಆಕ್ಷೇಪಣೆಗಳನ್ನು ತೆಗೆದುಹಾಕುವ ಅಥವಾ ಮನ್ನಾ ಮಾಡುವ ಅಧಿಕಾರವನ್ನು ಹೊಂದಿರುವುದಿಲ್ಲ. |
| (10) If the defects/objections are not condoned/waived on the day the matter is first listed, the nominated Registrar shall have the power to extend the time for compliance or rectification of defects by a maximum period of **two** (2) weeks from the date on which the matter is first listed before him, either by single or multiple orders and shall | (10) ಪ್ರಕರಣವನ್ನು ಮೊದಲು ಪಟ್ಟಿ ಮಾಡಿದ ದಿನದಂದು ದೋಷಗಳು/ಆಕ್ಷೇಪಣೆಗಳು ಮನ್ನಾ ಮಾಡಲ್ಪಡದಿದ್ದರೆ/ತೆಗೆದುಹಾಕಲ್ಪಡದಿದ್ದರೆ, ನಾಮನಿರ್ದೇಶಿತ ರಿಜಿಸ್ಟ್ರಾರ್‌ರವರು ಅವರ ಮುಂದೆ ಪ್ರಕರಣವನ್ನು ಮೊದಲು ಪಟ್ಟಿ ಮಾಡಿದ ದಿನಾಂಕದಿಂದ ಗರಿಷ್ಠ ಎರಡು (2) ವಾರಗಳ ಅವಧಿಗೆ, ಒಂದೇ ಅಥವಾ ಬಹು ಆದೇಶಗಳ ಮೂಲಕ ಪಾಲನೆ ಅಥವಾ ದೋಷಗಳ ಸರಿಪಡಿಸುವಿಕೆಗಾಗಿ ಸಮಯವನ್ನು ವಿಸ್ತರಿಸುವ ಅಧಿಕಾರವನ್ನು ಹೊಂದಿರುತ್ತಾರೆ ಮತ್ತು ತಕ್ಷಣವೇ |

| | |
|---|---|
| forthwith send the file to the compliance section. If rectification/compliance is made at any time before the expiry of the extended period, the matter shall be listed before the concerned Court within **two** (2) working days of such rectification/compliance. If rectification/compliance is not made within the extended period of **two** (2) weeks, the nominated Registrar shall, within **two** (2) working days after the expiry of the said period of **two** (2) weeks place the file before the Court with a recommendation for dismissal. The cases of this nature shall be listed in a separate list under the heading **"Orders – Dismissal for non-compliance/rectification of scrutiny defects/objections"**. | ಕಡತವನ್ನು ಪಾಲನಾ ವಿಭಾಗಕ್ಕೆ (ಕಂಪ್ಲೈಯನ್ಸ ವಿಭಾಗಕ್ಕೆ) ಕಳುಹಿಸತಕ್ಕದ್ದು. ವಿಸ್ತರಿತ ಅವಧಿ ಮುಗಿಯುವ ಮೊದಲು ಯಾವುದೇ ಸಮಯದಲ್ಲಿ ಸರಿಪಡಿಸುವಿಕೆ/ಪಾಲನೆ ಮಾಡಿದರೆ, ಅಂತಹ ಸರಿಪಡಿಸುವಿಕೆ/ಪಾಲನೆಯ ಎರಡು (2) ಕೆಲಸದ ದಿನಗಳೊಳಗೆ ಸಂಬಂಧಪಟ್ಟ ನ್ಯಾಯಾಲಯದ ಮುಂದೆ ಪ್ರಕರಣವನ್ನು ಪಟ್ಟಿ ಮಾಡತಕ್ಕದ್ದು. ಎರಡು (2) ವಾರಗಳ ವಿಸ್ತರಿತ ಅವಧಿಯೊಳಗೆ ಸರಿಪಡಿಸುವಿಕೆ/ಪಾಲನೆ ಮಾಡದಿದ್ದರೆ, ನಾಮನಿರ್ದೇಶಿತ ರಿಜಿಸ್ಟ್ರಾರ್ ರವರು, ಸದರಿ ಎರಡು (2) ವಾರಗಳ ಅವಧಿ ಮುಗಿದ ನಂತರ ಎರಡು (2) ಕೆಲಸದ ದಿನಗಳೊಳಗೆ, ವಜಾಗೊಳಿಸುವ ಶಿಫಾರಸಿನೊಂದಿಗೆ ಕಡತವನ್ನು ನ್ಯಾಯಾಲಯದ ಮುಂದೆ ಇಡತಕ್ಕದ್ದು. ಈ ಸ್ವರೂಪದ ಪ್ರಕರಣಗಳನ್ನು "ಆದೇಶಗಳು – ಪರಿಶೀಲನಾ ದೋಷಗಳು/ಆಕ್ಷೇಪಣೆಗಳ ಪಾಲನೆ/ಸರಿಪಡಿಸುವಿಕೆ ಮಾಡದ ಕಾರಣ ವಜಾ" ಎಂಬ ಶೀರ್ಷಿಕೆಯಡಿಯಲ್ಲಿ ಪ್ರತ್ಯೇಕ ಪಟ್ಟಿಯಲ್ಲಿ ಪಟ್ಟಿ ಮಾಡತಕ್ಕದ್ದು. |
| (11) The list of defects/objections, as regards the papers filed, shall be complete in all respects; once a list of defects/objections is put up/published as provided in sub-rule (2), no additional defects/objections shall be notified as regards the papers already submitted except those necessitated on account of compliance with the earlier notified defects/objections. These additional defects/objections shall be notified by publishing an additional list on the official website of the High Court with a | (11) ಸಲ್ಲಿಸಿದ ಕಾಗದಪತ್ರಗಳಿಗೆ ಸಂಬಂಧಿಸಿದಂತೆ ದೋಷಗಳ/ಆಕ್ಷೇಪಣೆಗಳ ಪಟ್ಟಿಯು ಎಲ್ಲಾ ರೀತಿಯಲ್ಲೂ ಸಂಪೂರ್ಣವಾಗಿರತಕ್ಕದ್ದು; ಉಪ-ನಿಯಮ (2) ರಲ್ಲಿ ಹೇಳಿದಂತೆ ದೋಷಗಳ/ಆಕ್ಷೇಪಣೆಗಳ ಪಟ್ಟಿಯನ್ನು ಒಮ್ಮೆ ಹಾಕಿದ/ಪ್ರಕಟಿಸಿದ ನಂತರ, ಈ ಹಿಂದೆ ಸೂಚಿಸಲಾದ ದೋಷಗಳ/ಆಕ್ಷೇಪಣೆಗಳ ಪಾಲನೆಯ ಕಾರಣದಿಂದಾಗಿ ಉಂಟಾಗಬಹುದಾದ ದೋಷಗಳನ್ನು/ಆಕ್ಷೇಪಣೆಗಳನ್ನು ಹೊರತುಪಡಿಸಿ, ಈಗಾಗಲೇ ಸಲ್ಲಿಸಿದ ಕಾಗದಪತ್ರಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚುವರಿ ದೋಷಗಳನ್ನು/ಆಕ್ಷೇಪಣೆಗಳನ್ನು ಸೂಚಿಸತಕ್ಕದ್ದಲ್ಲ. ಈ ಹೆಚ್ಚುವರಿ ದೋಷಗಳನ್ನು/ಆಕ್ಷೇಪಣೆಗಳನ್ನು, ಆ ನಿರ್ದಿಷ್ಟ ಪ್ರಕರಣದ "ಪ್ರಕರಣದ ವಸ್ತು ಸ್ಥಿತಿ" ಎಂಬ ಶೀರ್ಷಿಕೆಯಡಿಯಲ್ಲಿ, |

| | |
|---|---|
| date and time stamp under the sub-sub heading **"additional objections post compliance"** under the subheading **"scrutiny objections"**, under the heading **"case status"** of that particular case. | “ಪರಿಶೀಲನಾ ಆಕ್ಷೇಪಣೆಗಳು” ಎಂಬ ಉಪಶೀರ್ಷಿಕೆಯಡಿಯಲ್ಲಿ, “ಪಾಲನೆಯ ನಂತರದ ಹೆಚ್ಚುವರಿ ಆಕ್ಷೇಪಣೆಗಳು” ಎಂಬ ಉಪ ಶೀರ್ಷಿಕೆಯಡಿಯಲ್ಲಿ ದಿನಾಂಕ ಮತ್ತು ಸಮಯದ ಮುದ್ರೆಯೊಂದಿಗೆ ಉಚ್ಚ ನ್ಯಾಯಾಲಯದ ಅಧಿಕೃತ ಜಾಲತಾಣದಲ್ಲಿ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುವ ಮೂಲಕ ಸೂಚಿಸತಕ್ಕದ್ದು. |
| (12) The list of additional defects/objections shall be sent by e-mail and SMS, enclosing the URL of the location where the defects/objections are uploaded to the registered E-mail ID and Mobile Phone number of all the Parties, Parties-in-Person as well as the advocate/s who has/ve filed the papers. | (12) ಹೆಚ್ಚುವರಿ ದೋಷಗಳ/ಆಕ್ಷೇಪಣೆಗಳ ಪಟ್ಟಿಯನ್ನು, ದೋಷಗಳು/ ಆಕ್ಷೇಪಣೆಗಳನ್ನು ಅಪ್ಲೋಡ್ ಮಾಡಲಾದ ಸ್ಥಳದ URL ಅನ್ನು ಲಗತ್ತಿಸಿ, ಕಾಗದಪತ್ರಗಳನ್ನು ಸಲ್ಲಿಸಿರುವ ಎಲ್ಲಾ ಪಕ್ಷಕಾರರ, ಖುದ್ದು ಹಾಜರಾಗುವ ಪಕ್ಷಕಾರರ ಹಾಗೂ ವಕೀಲರ ನೋಂದಾಯಿತ ಇ-ಮೇಲ್ ಐಡಿ ಮತ್ತು ಮೊಬೈಲ್ ಫೋನ್ ಸಂಖ್ಯೆಗೆ ಇ-ಮೇಲ್ ಮತ್ತು ಎಸ್‌ಎಂಎಸ್ ಮೂಲಕ ಕಳುಹಿಸತಕ್ಕದ್ದು. |
| (13) The additional defects/objections shall be rectified/complied with by the Party/ies-in-Person or the Advocate presenting the papers within **one** (1) week from the date the additional defects/objections are uploaded on the website, if not so rectified/complied, the procedure prescribed in sub-rules (6) to (10) above shall be followed. | (13) ಹೆಚ್ಚುವರಿ ದೋಷಗಳನ್ನು/ ಆಕ್ಷೇಪಣೆಗಳನ್ನು ಜಾಲತಾಣದಲ್ಲಿ ಅಪ್ಲೋಡ್ ಮಾಡಿದ ದಿನಾಂಕದಿಂದ ಒಂದು (1) ವಾರದೊಳಗೆ ಕಾಗದಪತ್ರಗಳನ್ನು ಹಾಜರುಪಡಿಸುವ ಖುದ್ದು ಹಾಜರಾಗುವ ಪಕ್ಷಕಾರರು ಅಥವಾ ವಕೀಲರು ಸರಿಪಡಿಸತಕ್ಕದ್ದು/ ಪಾಲಿಸತಕ್ಕದ್ದು, ಹಾಗೆ ಸರಿಪಡಿಸದಿದ್ದರೆ/ ಪಾಲಿಸದಿದ್ದರೆ, ಮೇಲಿನ ಉಪ-ನಿಯಮಗಳು (6) ರಿಂದ (10) ರಲ್ಲಿ ಸೂಚಿಸಲಾದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು. |
| (14) Notwithstanding the above, if a time is fixed for auto-listing by the Chief Justice or the concerned Court, the matter shall be listed before the concerned Court as per the time fixed, whether the | (14) ಮೇಲೆ ಹೇಳಿದ ಯಾವುದನ್ನೂ ಪರಿಗಣಿಸದೆ, ಮುಖ್ಯ ನ್ಯಾಯಮೂರ್ತಿಗಳು ಅಥವಾ ಸಂಬಂಧಪಟ್ಟ ನ್ಯಾಯಾಲಯವು ಅಟೋಲಿಸ್ಟಿಂಗ್ ಸಮಯವನ್ನು ನಿಗದಿಪಡಿಸಿದ್ದರೆ, ದೋಷಗಳನ್ನು / ಆಕ್ಷೇಪಣೆಗಳನ್ನು ಸರಿಪಡಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಗಣಿಸದೆ, ನಿಗದಿಪಡಿಸಿದ ಸಮಯದ ಪ್ರಕಾರ ಸಂಬಂಧಪಟ್ಟ ನ್ಯಾಯಾಲಯದ ಮುಂದೆ ಪ್ರಕರಣವನ್ನು ಪಟ್ಟಿ ಮಾಡತಕ್ಕದ್ದು. |

| | |
|---|---|
| defects/objections have been rectified/complied with or not. | |
| (15) Notwithstanding the above, if a matter is moved before the concerned Court by the Party in person or the Advocate for listing and the Court has permitted the listing, the matter shall be listed as per the orders of the Court without fail, whether the defects/objections have been rectified/complied with or not. A register of matters moved, shall be maintained with the following details: | (15) ಮೇಲೆ ಹೇಳಿದ ಯಾವುದನ್ನೂ ಪರಿಗಣಿಸದೆ, ಖುದ್ದು ಹಾಜರಾಗುವ ಪಕ್ಷಕಾರರು ಅಥವಾ ವಕೀಲರು ಪ್ರಕರಣವನ್ನು ಪಟ್ಟಿ ಮಾಡಲು ಸಂಬಂಧಪಟ್ಟ ನ್ಯಾಯಾಲಯದ ಮುಂದೆ ಮೆಮೋ ಸಲ್ಲಿಸಿದಲ್ಲಿ ಮತ್ತು ನ್ಯಾಯಾಲಯವು ಪಟ್ಟಿ ಮಾಡಲು ಅನುಮತಿ ನೀಡಿದ್ದರೆ, ದೋಷಗಳನ್ನು/ಆಕ್ಷೇಪಣೆಗಳನ್ನು ಸರಿಪಡಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಗಣಿಸದೆ, ನ್ಯಾಯಾಲಯದ ಆದೇಶಗಳ ಪ್ರಕಾರ ಪ್ರಕರಣವನ್ನು ತಪ್ಪದೆ ಪಟ್ಟಿ ಮಾಡತಕ್ಕದ್ದು. ಮೆಮೋ ಮೂಲಕ ತೆಗೆದುಕೊಳ್ಳುವ ಪ್ರಕರಣಗಳ ವಹಿಯನ್ನು ಈ ಕೆಳಗಿನ ವಿವರಗಳೊಂದಿಗೆ ನಿರ್ವಹಿಸತಕ್ಕದ್ದು: |
| i. The date and time on which the matter was moved - to be filled in by the Court officer or the Assistant Court officer of that particular Court; | i. ಮೆಮೋವನ್ನು ಮಂಡಿಸಲಾದ ದಿನಾಂಕ ಮತ್ತು ಸಮಯ – ಇದನ್ನು ಆ ನಿರ್ದಿಷ್ಟ ನ್ಯಾಯಾಲಯದ ’ನ್ಯಾಯಾಲಯ-ಅಧಿಕಾರಿ’ ಅಥವಾ ’ಸಹಾಯಕ ನ್ಯಾಯಾಲಯ- ಅಧಿಕಾರಿ’ ಭರ್ತಿ ಮಾಡತಕ್ಕದ್ದು; |
| ii. The date fixed by the Court for listing - to be filled in by the Court officer or the Assistant Court officer of that particular Court; | ii. ನ್ಯಾಯಾಲಯವು ವಿಚಾರಣೆಗೆ ನಿಗದಿಪಡಿಸಿದ ದಿನಾಂಕ – ಇದನ್ನು ಆ ನಿರ್ದಿಷ್ಟ ನ್ಯಾಯಾಲಯದ ’ನ್ಯಾಯಾಲಯ-ಅಧಿಕಾರಿ’ ಅಥವಾ ’ಸಹಾಯಕ ನ್ಯಾಯಾಲಯ- ಅಧಿಕಾರಿ’ ಭರ್ತಿ ಮಾಡತಕ್ಕದ್ದು; |
| iii. The date and time on which the memo was sent to the scrutiny/pending branch - to be filled in by the Court officer or the Assistant Court officer of that particular Court; | iii. ಜ್ಞಾಪನಾ ಪತ್ರವನ್ನು ಪರಿಶೀಲನಾ/ಪೆಂಡಿಂಗ್ ಶಾಖೆಗೆ ಕಳುಹಿಸಲಾದ ದಿನಾಂಕ ಮತ್ತು ಸಮಯ – ಇದನ್ನು ಆ ನಿರ್ದಿಷ್ಟ ನ್ಯಾಯಾಲಯದ ’ನ್ಯಾಯಾಲಯ-ಅಧಿಕಾರಿ’ ಅಥವಾ ’ಸಹಾಯಕ ನ್ಯಾಯಾಲಯ- ಅಧಿಕಾರಿ’ ಭರ್ತಿ ಮಾಡತಕ್ಕದ್ದು; |
| iv. The date and time on which the scrutiny/pending branch received the memo - to be filled in by the Concerned officer in the Scrutiny/pending branch; | iv. ಪರಿಶೀಲನಾ/ಪೆಂಡಿಂಗ್ ಶಾಖೆಯು ಜ್ಞಾಪನಾ ಪತ್ರವನ್ನು ಸ್ವೀಕರಿಸಿದ ದಿನಾಂಕ ಮತ್ತು ಸಮಯ – ಇದನ್ನು ಪರಿಶೀಲನಾ/ಪೆಂಡಿಂಗ್ ಶಾಖೆಯಲ್ಲಿನ ಸಂಬಂಧಪಟ್ಟ ಅಧಿಕಾರಿ ಭರ್ತಿ ಮಾಡತಕ್ಕದ್ದು; |

| | |
|---|---|
| v. The date and time on which the file was sent to the Board branch - to be filled in by the Concerned officer in the Scrutiny/pending branch; | v. ಕಡತವನ್ನು ಬೋರ್ಡ್ ಬ್ರಾಂಚ್ ಗೆ ಕಳುಹಿಸಲಾದ ದಿನಾಂಕ ಮತ್ತು ಸಮಯ – ಇದನ್ನು ಪರಿಶೀಲನಾ/ಪೆಂಡಿಂಗ್ ಶಾಖೆಯಲ್ಲಿನ ಸಂಬಂಧಪಟ್ಟ ಅಧಿಕಾರಿ ಭರ್ತಿ ಮಾಡತಕ್ಕದ್ದು; |
| vi. The date and time on which the file was received by the Board branch - to be filled in by the concerned officer of the Board branch; | vi. ಕಡತವನ್ನು ಬೋರ್ಡ್ ಬ್ರಾಂಚ್ ಸ್ವೀಕರಿಸಿದ ದಿನಾಂಕ ಮತ್ತು ಸಮಯ – ಇದನ್ನು ಬೋರ್ಡ್ ಬ್ರಾಂಚ್‌ಗೆ ಸಂಬಂಧಪಟ್ಟ ಅಧಿಕಾರಿ ಭರ್ತಿ ಮಾಡತಕ್ಕದ್ದು; |
| vi. The date on which the file was listed before the Court - to be filled in by the concerned officer of the Board branch. | vi. ಕಡತವನ್ನು ನ್ಯಾಯಾಲಯದ ಮುಂದೆ ವಿಚಾರಣೆಗೆ ಪಟ್ಟಿ ಮಾಡಿದ ದಿನಾಂಕ – ಇದನ್ನು ಬೋರ್ಡ್ ಬ್ರಾಂಚ್‌ನ ಸಂಬಂಧಪಟ್ಟ ಅಧಿಕಾರಿ ಭರ್ತಿ ಮಾಡತಕ್ಕದ್ದು. |
| (16) Notwithstanding the above, if a matter is auto-listed as per the directions issued by the Chief Justice or by the concerned Court without rectification/compliance or listed before the Court based on the Party in person or the Advocate having moved the concerned Court for condonation, dispensation or waiver of the notified defects/objections by making a submission in writing detailing the reasons for such condonation, dispensation or waiver and request the Court to take up the matter for Preliminary Hearing/Admission/ Orders and if the said defects/objections are not condoned, dispensed or waived, the rectification/compliance shall be made within **two** (2) weeks of such listing unless the Court fixes any other shorter time period. | (16) ಮೇಲಿನದಕ್ಕೆ ಬಾಧಕವಿಲ್ಲದೆ, ಮುಖ್ಯ ನ್ಯಾಯಮೂರ್ತಿಗಳು ಅಥವಾ ಸಂಬಂಧಪಟ್ಟ ನ್ಯಾಯಾಲಯವು ನೀಡಿದ ನಿರ್ದೇಶನಗಳ ಪ್ರಕಾರ, ಸರಿಪಡಿಸುವಿಕೆ/ ಪಾಲನೆ ಇಲ್ಲದೆ ಒಂದು ಪ್ರಕರಣವು ಅಟೋ ಲಿಸ್ಟಿಂಗ್ ಮಾಡಲ್ಪಟ್ಟರೆ ಅಥವಾ ಖುದ್ದು ಹಾಜರಾಗುವ ಪಕ್ಷಕಾರರು ಅಥವಾ ವಕೀಲರು ಸಂಬಂಧಪಟ್ಟ ನ್ಯಾಯಾಲಯವನ್ನು ಸಂಪರ್ಕಿಸಿ, ಸೂಚಿತ ದೋಷಗಳು/ ಆಕ್ಷೇಪಣೆಗಳ ಮನ್ನಾ, ವಿನಾಯಿತಿ ಅಥವಾ ವರ್ಜಿಸಲು, ಅಂತಹ ಮನ್ನಾ, ವಿನಾಯಿತಿ ಅಥವಾ ಪರಿತ್ಯಾಗದ ಕಾರಣಗಳನ್ನು ವಿವರಿಸಿ ಲಿಖಿತ ರೂಪದಲ್ಲಿ ಅಹವಾಲು ಸಲ್ಲಿಸುವ ಮೂಲಕ ಮತ್ತು ಪ್ರಕರಣವನ್ನು ಪ್ರಾಥಮಿಕ ವಿಚಾರಣೆ/ ದಾಖಲಾತಿ/ಆದೇಶಗಳಿಗಾಗಿ ಕೈಗೆತ್ತಿಕೊಳ್ಳಲು ನ್ಯಾಯಾಲಯವನ್ನು ಕೋರಿದ ಆಧಾರದ ಮೇಲೆ ನ್ಯಾಯಾಲಯದ ಮುಂದೆ ಪಟ್ಟಿ ಮಾಡಲ್ಪಟ್ಟರೆ, ಮತ್ತು ಸದರಿ ದೋಷಗಳು/ ಆಕ್ಷೇಪಣೆಗಳನ್ನು ಮನ್ನಾ ಮಾಡದಿದ್ದರೆ, ವಿನಾಯಿತಿ ನೀಡದಿದ್ದರೆ ಅಥವಾ ವರ್ಜಿಸದಿದ್ದರೆ, ನ್ಯಾಯಾಲಯವು ಯಾವುದೇ ಇತರ ಕಡಿಮೆ ಕಾಲಾವಧಿಯನ್ನು ನಿಗದಿಪಡಿಸದ ಹೊರತು ನ್ಯಾಯಾಲಯದ ಮುಂದೆ ಪಟ್ಟಿಯಾದ ದಿನದಿಂದ ಎರಡು (2) ವಾರಗಳೊಳಗೆ ಸರಿಪಡಿಸುವಿಕೆ/ ಪಾಲನೆಯನ್ನು ಮಾಡತಕ್ಕದ್ದು. |

| | |
|---|---|
| (17) If the rectification/ compliance is not made within the time fixed under sub-rule (16) above, any interim order granted shall stand vacated on the expiry of that period on its own, or, as the case may be, the expiry of the next working day, if the earlier day is a holiday, unless the Court, in its discretion, enlarges such period, not exceeding **thirty (30) days**, even though the period originally fixed or granted may have expired. This sub-rule would, however, not apply to a situation where the Court has not passed orders on the request of the Party/ies-in-Person or the Advocate for condonation, dispensation or waiver of objections/defects. | (17) ಮೇಲಿನ ಉಪ-ನಿಯಮ (16) ರ ಅಡಿಯಲ್ಲಿ ನಿಗದಿಪಡಿಸಿದ ಸಮಯದೊಳಗೆ ಸರಿಪಡಿಸುವಿಕೆ/ ಪಾಲನೆಯನ್ನು ಮಾಡದಿದ್ದರೆ, ನೀಡಲಾದ ಯಾವುದೇ ಮಧ್ಯಂತರ ಆದೇಶವು, ಅದರ ಮೂಲತಃ ನಿಗದಿಪಡಿಸಿದ ಅಥವಾ ನೀಡಿದ ಅವಧಿಯು ಮುಗಿದು ಹೋಗಿದ್ದರೂ ಸಹ ನ್ಯಾಯಾಲಯವು ತನ್ನ ವಿವೇಚನೆಯಿಂದ ಅಂತಹ ಅವಧಿಯನ್ನು ಮೂವತ್ತು (30) ದಿನಗಳನ್ನು ಮೀರದಂತೆ ವಿಸ್ತರಿಸದ ಹೊರತು, ಆ ಆದೇಶವು ಅದರ ಅವಧಿಯ ಮುಕ್ತಾಯದ ನಂತರ ತನ್ನಿಂತಾನೇ, ಅಥವಾ, ಸಂದರ್ಭಾನುಸಾರ, ಹಿಂದಿನ ದಿನವು ರಜಾದಿನವಾಗಿದ್ದರೆ, ಮುಂದಿನ ಕೆಲಸದ ದಿನದ ಮುಕ್ತಾಯದ ನಂತರ ತೆರವುಗೊಳ್ಳುತ್ತದೆ. ಆದಾಗ್ಯೂ, ಯಾವ ಸಂದರ್ಭದಲ್ಲಿ ಖುದ್ದು ಹಾಜರಾಗುವ ಪಕ್ಷಕಾರರು ಅಥವಾ ವಕೀಲರು ಕಛೇರಿಯು ಮಾಡಿದ ಆಕ್ಷೇಪಣೆಗಳ/ ದೋಷಗಳ ಮನ್ನಾ, ವಿನಾಯಿತಿ ಅಥವಾ ವರ್ಜಿಸುವ ಕೋರಿಕೆಯ ಮೇಲೆ ನ್ಯಾಯಾಲಯವು ಆದೇಶಗಳನ್ನು ಹೊರಡಿಸಿಲ್ಲವೋ ಅಂತಹ ಸಂದರ್ಭಕ್ಕೆ ಈ ಉಪ-ನಿಯಮವು ಅನ್ವಯಿಸುವುದಿಲ್ಲ. |
| (18) The Chief Justice may issue such directions in regard to the above as necessary at his discretion. | (18) ಮುಖ್ಯ ನ್ಯಾಯಮೂರ್ತಿಗಳು ಮೇಲಿನದಕ್ಕೆ ಸಂಬಂಧಿಸಿದಂತೆ ತಮ್ಮ ವಿವೇಚನೆಯಿಂದ ಅಗತ್ಯವಿರುವಂತಹ ನಿರ್ದೇಶನಗಳನ್ನು ನೀಡಬಹುದು. |
| **III. Rule 17 would have to be deleted** | III. ನಿಯಮ 17 ನ್ನು ತೆಗೆದುಹಾಕಬೇಕಾಗುತ್ತದೆ. |

****

**IN THE HIGH COURT OF KARNATAKA AT BENGALURU/DHARWAD/KALABURAGI**
**CHECK LIST (WRIT PETITION)**

ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ,
ಬೆಂಗಳೂರು/ಧಾರವಾಡ/ಕಲಬುರಗಿ ಪೀಠ
ಪರಿಶೀಲನಾ ಪಟ್ಟಿ (ರಿಟ್ ಅರ್ಜಿ)

| **Sl.No.** ಕ್ರಮ ಸಂಖ್ಯೆ. | **Particulars** ವಿವರಗಳು | **Complied** ಪಾಲಿಸಲಾಗಿದೆ | | | **If not complied, Counsel/ Party-in-Person Submission** ಪಾಲಿಸದಿದ್ದಲ್ಲಿ, ವಕೀಲರು / ಖುದ್ದು ಹಾಜರಾಗುವ ಪಕ್ಷಗಾರರ ನಿವೇದನೆ |
|---|---|---|---|---|---|
| | | **Yes** ಹೌದು | No ಇಲ್ಲ | N/A ಅನ್ವಯಿಸುವುದಿಲ್ಲ | |
| 1. | a) Whether E-mail ID and Mobile number of the Petitioner/s stated in Cause title?<br>b) If known, that of respondent/s also to be stated.<br>a) ಅರ್ಜಿಯ ಶೀರ್ಷಿಕೆಯಲ್ಲಿ ಅರ್ಜಿದಾರರ(ರು) ಇ-ಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆಯನ್ನು ನಮೂದಿಸಲಾಗಿದೆಯೇ?<br>b) ತಿಳಿದಿದ್ದಲ್ಲಿ, ಎದುರುದಾರರ ಇ-ಮೇಲ್ ಐ.ಡಿ. ಮತ್ತು ಮೊಬೈಲ್ ಸಂಖ್ಯೆಯನ್ನು ಸಹ ನಮೂದಿಸತಕ್ಕದ್ದು. | | | | |
| 2. | Whether this Writ Petition is maintainable?<br>ಈ ರಿಟ್ ಅರ್ಜಿಯು ನಿರ್ವಹಣಾರ್ಹವಾಗಿದೆಯೇ? | | | | |

| | | | | | |
|---|---|---|---|---|---|
| 3. | Whether the Presentation is as per Rule 2, 3 and 4 of Chapter XII of H.C. Rules?<br><br>ಉಚ್ಚ ನ್ಯಾಯಾಲಯದ ನಿಯಮಗಳ ಅಧ್ಯಾಯ XII ರ ನಿಯಮ 2, 3 ಮತ್ತು 4 ರ ಪ್ರಕಾರ ಈ ಸಲ್ಲಿಕೆಯು ಇದೆಯೇ? | | | | |
| 4. | Whether papers are properly paginated? (As per Rule 2 of Chapter XII of H.C. Rules); If so,<br>a) Index is filed and filled properly?<br>b) Whether IAs filed are paginated in continuation of WP papers with separate Index? (Rule 2 of Chapter XII of H.C. Rules)<br><br>ಕಾಗದಪತ್ರಗಳಿಗೆ ಸರಿಯಾಗಿ ಪುಟಸಂಖ್ಯೆ ನೀಡಲಾಗಿದೆಯೇ? (ಉಚ್ಚ ನ್ಯಾಯಾಲಯದ ನಿಯಮಗಳ ಅಧ್ಯಾಯ XII ರ ನಿಯಮ 2 ರ ಪ್ರಕಾರ); ಹಾಗಿದ್ದಲ್ಲಿ,<br>a) ಪರಿವಿಡಿಯನ್ನು ಸಲ್ಲಿಸಲಾಗಿದೆಯೇ ಮತ್ತು ಸರಿಯಾಗಿ ಭರ್ತಿ ಮಾಡಲಾಗಿದೆಯೇ?<br>b) ಮಧ್ಯಂತರ ಅರ್ಜಿಗಳು ಇದ್ದಲ್ಲಿ ಅವುಗಳಿಗೆ ಪ್ರತ್ಯೇಕ ಸೂಚಿ ಪಟ್ಟಿ ಇದೆಯೇ ಹಾಗೂ ರಿಟ್ ಅರ್ಜಿಯ ಕಾಗದಪತ್ರಗಳ ಮುಂದುವರಿಕೆಯಾಗಿ ಪುಟಸಂಖ್ಯೆ ನೀಡಲಾಗಿದೆಯೇ? (ಉಚ್ಚ ನ್ಯಾಯಾಲಯದ ನಿಯಮಗಳ ಅಧ್ಯಾಯ XII ರ ನಿಯಮ 2) | | | | |
| 5. | Whether the Petition & Annexures are typed on strong & durable paper as required under Rule 2 of Chapter XII of HC Rules and is legible?<br><br>ಅರ್ಜಿಯನ್ನು ಮತ್ತು ಅನುಬಂಧಗಳನ್ನು ಉತ್ತಮ ಗುಣಮಟ್ಟದ ಮತ್ತು ಬಾಳಿಕೆ ಬರುವ ಕಾಗದದ ಮೇಲೆ ಮುದ್ರಿಸಲಾಗಿದೆಯೇ ಹಾಗೂ ಅವು ಸ್ಪಷ್ಟವಾಗಿವೆಯೇ? (ಉಚ್ಚ | | | | |

| | | | | | |
|---|---|---|---|---|---|
| | ನ್ಯಾಯಾಲಯದ ನಿಯಮಗಳ ಅಧ್ಯಾಯ XII ರ ನಿಯಮ 2 ರ ಅಡಿಯಲ್ಲಿ ಅಗತ್ಯವಿರುವಂತೆ) | | | | |
| 6. | Whether Court Fees paid is sufficient or not? – As Per the Rule 7 of W.P Rules<br>ಸರಿಯಾದ ನ್ಯಾಯಾಲಯ-ಶುಲ್ಕ ಪಾವತಿಸಲಾಗಿದೆಯೇ ಅಥವಾ ಇಲ್ಲವೇ? ( ರಿಟ್ ಅರ್ಜಿ ನಿಯಮಗಳ ನಿಯಮ 7 ರ ಪ್ರಕಾರ) | | | | |
| 7. | Whether Petition is accompanied by Synopsis of the case along with brief facts as required under Rule 2[3b] of W.P. Rules? (list of dates in chronological order with relevant facts/events)<br>ಅರ್ಜಿಯೊಂದಿಗೆ ಪ್ರಕರಣದ ಸಾರಾಂಶವನ್ನು ಸಂಕ್ಷಿಪ್ತ ವಾಸ್ತವಾಂಶಗಳ ಜೊತೆ ಲಗತ್ತಿಸಲಾಗಿದೆಯೇ? ಹಾಗೂ ಸಂಬಂಧಿತ ವಾಸ್ತವಾಂಶಗಳು/ಘಟನೆಗಳನ್ನು ದಿನಾಂಕಗಳ ಅನುಕ್ರಮದಲ್ಲಿ ಪಟ್ಟಿ ಮಾಡಲಾಗಿದೆಯೇ?<br>(ರಿಟ್ ಅರ್ಜಿ ನಿಯಮಗಳ, ನಿಯಮ 2[3ಬಿ] ರ ಅಡಿಯಲ್ಲಿ ಅಗತ್ಯವಿರುವಂತೆ) | | | | |
| 8. | Whether the name, age (with age proof for Senior Citizen), address and PIN CODE of the petitioner/s & Respondent/s at the cause title is stated in full? (As Per Circular No. R(J) 25M/2002 dated 14.01.2003 and Chapter VII Rule 2(1) of H.C Rules)<br>ವ್ಯಾಜ್ಯ ಶೀರ್ಷಿಕೆಯಲ್ಲಿ ಅರ್ಜಿದಾರರು ಮತ್ತು ಪ್ರತಿವಾದಿಗಳ ಹೆಸರು, ವಯಸ್ಸು (ಹಿರಿಯ ನಾಗರಿಕರಾಗಿದ್ದಲ್ಲಿ ವಯಸ್ಸಿನ ಪುರಾವೆಯೊಂದಿಗೆ), ವಿಳಾಸ ಮತ್ತು ಪಿನ್ ಕೋಡ್ ಅನ್ನು ಪೂರ್ಣವಾಗಿ ನಮೂದಿಸಲಾಗಿದೆಯೇ?<br>(ದಿನಾಂಕ 14.01.2003 ರ ಸುತ್ತೋಲೆ ಸಂಖ್ಯೆ ಆರ್(ಜೆ) 25ಎಂ/2002 ಮತ್ತು ಉಚ್ಚ ನ್ಯಾಯಾಲಯದ ನಿಯಮಗಳ ಅಧ್ಯಾಯ VII ನಿಯಮ 2(1) ರ ಪ್ರಕಾರ) | | | | |

| | | | | | |
|---|---|---|---|---|---|
| 9. | Whether the running Cause Title is furnished for Writ Petitions filed against common order passed for more than one Application Number in S-KSAT/CAT matters<br><br>ಎಸ್-ಕೆಎಸ್ಎಟಿ/ಸಿಎಟಿ ಪ್ರಕರಣಗಳಲ್ಲಿ ಒಂದಕ್ಕಿಂತ ಹೆಚ್ಚು ಅರ್ಜಿ ಸಂಖ್ಯೆಗಳಿಗೆ ಸಂಬಂಧಿಸಿದಂತೆ ಹೊರಡಿಸಲಾದ ಸಾಮಾನ್ಯ ಆದೇಶದ ವಿರುದ್ಧ ಸಲ್ಲಿಸಲಾದ ರಿಟ್ ಅರ್ಜಿಗಳಲ್ಲಿ ಸದರಿ ಆದೇಶದಲ್ಲಿ ಒದಗಿಸಿರುವಂತೆಯೇ ವ್ಯಾಜ್ಯ ಶೀರ್ಷಿಕೆಯನ್ನು (ರನ್ನಿಂಗ್ ಕಾಸ್-ಟೈಟಲ್) ನಮೂದಿಸಲಾಗಿದೆಯೇ ? | | | | |
| 10. | a) Whether reason for not making any of the parties in the court below or authorities is mentioned at the end of the cause title of W.P.?<br><br>b) Whether the Petitioner is a Party in the Court/Authorities below and their ranking are mentioned at Cause Title?<br><br>a) ಕೆಳ ನ್ಯಾಯಾಲಯ ಅಥವಾ ಪ್ರಾಧಿಕಾರಗಳಲ್ಲಿನ ಯಾವುದೇ ಪಕ್ಷಕಾರರನ್ನು ರಿಟ್ ಅರ್ಜಿಯಲ್ಲಿ ಪಕ್ಷಕಾರರನ್ನಾಗಿ ಮಾಡದಿರುವುದಕ್ಕೆ ಕಾರಣವನ್ನು ರಿಟ್ ಅರ್ಜಿಯ ವ್ಯಾಜ್ಯ ಶೀರ್ಷಿಕೆಯ ಕೊನೆಯಲ್ಲಿ ಉಲ್ಲೇಖಿಸಲಾಗಿದೆಯೇ?<br><br>b) ಅರ್ಜಿದಾರರು ಕೆಳ ನ್ಯಾಯಾಲಯ/ ಪ್ರಾಧಿಕಾರಗಳಲ್ಲಿ ಪಕ್ಷಕಾರರಾಗಿದ್ದಾರೆಯೇ ಮತ್ತು ಅವರ ಸ್ಥಾನ/ಕ್ರಮಾಂಕವನ್ನು ವ್ಯಾಜ್ಯ ಶೀರ್ಷಿಕೆಯಲ್ಲಿ ಉಲ್ಲೇಖಿಸಲಾಗಿದೆಯೇ? | | | | |
| 11. | Whether the Certificate of Registration is furnished if Registered Company/Association/Society/Partnership Firm is petitioner as per Circular No. R (J) 41/2022 dated 26/05/2022<br><br>ನೋಂದಾಯಿತ ಕಂಪನಿ/ ಸಂಘ /ಸೊಸೈಟಿ/ ಪಾಲುದಾರಿಕೆ ಸಂಸ್ಥೆಯು ಅರ್ಜಿದಾರರಾಗಿದ್ದರೆ | | | | |

| | | | | | |
|---|---|---|---|---|---|
| | ನೋಂದಣಿ ಪ್ರಮಾಣಪತ್ರವನ್ನು ಒದಗಿಸಲಾಗಿದೆಯೇ? (ದಿನಾಂಕ 26/05/2022 ರ ಸುತ್ತೋಲೆ ಸಂಖ್ಯೆ ಆರ್ (ಜೆ) 41/2022 ರ ಪ್ರಕಾರ) | | | | |
| 12. | Whether Jurisdictional Tahsildar is made as party in KLGP matters as per Circular No. R(J) 29/2024 dated 14/02/2024?<br><br>ಕೆಎಲ್‌ಜಿಪಿ ಪ್ರಕರಣಗಳಲ್ಲಿ ಅಧಿಕಾರ ವ್ಯಾಪ್ತಿಯ ತಹಶೀಲ್ದಾರರನ್ನು ಪಕ್ಷಕಾರರನ್ನಾಗಿ ಮಾಡಲಾಗಿದೆಯೇ? (ದಿನಾಂಕ 14/02/2024 ರ ಸುತ್ತೋಲೆ ಸಂಖ್ಯೆ ಆರ್(ಜೆ) 29/2024 ರ ಪ್ರಕಾರ) | | | | |
| 13. | Whether provision of law is mentioned correctly?<br><br>ಕಾನೂನಿನ ಉಪಬಂಧ/ಕಲಂಗಳನ್ನು ಸರಿಯಾಗಿ ಉಲ್ಲೇಖಿಸಲಾಗಿದೆಯೇ? | | | | |
| 14. | Whether paragraphs are properly numbered? (Rule 2[2] of W.P. Rules)<br><br>ಪ್ಯಾರಾಗಳಿಗೆ ಸರಿಯಾದ ಕ್ರಮಸಂಖ್ಯೆ ನೀಡಲಾಗಿದೆಯೇ?<br><br>(ರಿಟ್ ಅರ್ಜಿ ನಿಯಮಗಳ, ನಿಯಮ 2[2] ರಂತೆ) | | | | |
| 15. | Whether petition contains jurisdiction, detailed facts & grounds? – As Per the Rule 2 of Writ Proceedings Rules<br><br>ಅರ್ಜಿಯಲ್ಲಿ ಅಧಿಕಾರ ವ್ಯಾಪ್ತಿ, ವಿವರವಾದ ವಾಸ್ತವಾಂಶಗಳು ಮತ್ತು ಕಾರಣ/ಆಧಾರಗಳನ್ನು ಒಳಗೊಂಡಿದೆಯೇ? (ರಿಟ್ ಪ್ರಕ್ರಿಯೆಗಳ ನಿಯಮಗಳ ನಿಯಮ 2 ರ ಪ್ರಕಾರ) | | | | |

| | | | | | |
|---|---|---|---|---|---|
| 16. | Whether there is a statement that any other remedy provided for/by or under any other law for time being in force?(Remedy availed with result, if any, be stated) [Rule 2(3) of W.P. Rules]<br><br>ಚಾಲ್ತಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಅಡಿಯಲ್ಲಿ ಒದಗಿಸಲಾದ/ ನೀಡಲಾದ ಯಾವುದೇ ಇತರ ಪರಿಹಾರದ ಬಗ್ಗೆ ಹೇಳಿಕೆ ಇದೆಯೇ? (ಪರಿಹಾರವನ್ನು ಪಡೆದಿದ್ದರೆ, ಅದರ ಫಲಿತಾಂಶವನ್ನು ನಮೂದಿಸಬೇಕು)<br><br>[ರಿಟ್ ಅರ್ಜಿ ನಿಯಮಗಳ, ನಿಯಮ 2(3) ರಂತೆ] | | | | |
| 17. | Whether there is a statement by the Petitioner regarding filing of WP earlier for the same cause of action? & if so, result thereof. (As per Rule 2 {3(a)} of W.P. Rules)<br><br>ಅದೇ ವ್ಯಾಜ್ಯ ಕಾರಣಕ್ಕಾಗಿ ಈ ಹಿಂದೆ ರಿಟ್ ಅರ್ಜಿ ಸಲ್ಲಿಸಿರುವ ಬಗ್ಗೆ ಅರ್ಜಿದಾರರಿಂದ ಹೇಳಿಕೆ ಇದೆಯೇ? ಹಾಗಿದ್ದಲ್ಲಿ, ಅದರ ಫಲಿತಾಂಶವನ್ನು ನಮೂದಿಸಲಾಗಿದೆಯೇ? (ರಿಟ್ ಅರ್ಜಿ ನಿಯಮಗಳ ನಿಯಮ 2 {3(a)} ರ ಪ್ರಕಾರ) | | | | |
| 18. | If Writ Petition is filed U/Sec. 482 of Cr.P.C./ U/Sec. 528 of BNSS, whether any case is disposed/pending before this High Court of Karnataka on same Cr.No. and on same accused or co-accused to be mentioned in Memorandum of Writ Petition as per the Circular R.J. HCE 154/12 dated 10/02/2012 and R.J.169/2022, dated 21/09/2022.<br><br>ಸಿ.ರ್.ಪಿ.ಸಿ ಯ ಕಲಂ 482 / ಬಿ.ಎನ್.ಎಸ್.ಎಸ್. ನ ಕಲಂ 528 ರ ಅಡಿಯಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದರೆ, ಅದೇ ಕ್ರೈಂ ಸಂಖ್ಯೆಯ ಮತ್ತು ಅದೇ ಆರೋಪಿ ಅಥವಾ ಸಹ-ಆರೋಪಿಗೆ ಸಂಬಂಧಿಸಿದಂತೆ ಯಾವುದಾದರೂ ಪ್ರಕರಣವು | | | | |

| | | | | | |
|---|---|---|---|---|---|
| | ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ವಿಲೇವಾರಿಗೊಂಡಿದೆಯೇ/ಬಾಕಿ ಇದೆಯೇ ಎಂಬುದನ್ನು ರಿಟ್ ಅರ್ಜಿಯ ಜ್ಞಾಪನಾ ಪತ್ರದಲ್ಲಿ ನಮೂದಿಸಲಾಗಿದೆಯೇ?<br><br>(ಸುತ್ತೋಲೆ ಆರ್.ಜೆ. ಎಚ್.ಸಿ.ಇ 154/12 ದಿನಾಂಕ 10/02/2012 ಮತ್ತು ಆರ್.ಜೆ.169/2022, ದಿನಾಂಕ 21/09/2022 ರ ಪ್ರಕಾರ) | | | | |
| 19. | Whether the enclosures are described as Annexures and marked? (As Per Rule 6 of W.P. Rules)<br><br>ಲಗತ್ತುಗಳನ್ನು ಅನುಬಂಧಗಳೆಂದು ವಿವರಿಸಿ ಗುರುತಿಸಲಾಗಿದೆಯೇ? (ರಿಟ್ ಅರ್ಜಿ ನಿಯಮಗಳ ನಿಯಮ 6 ರ ಪ್ರಕಾರ) | | | | |
| 20. | If the petition is for issue of writ of certiorari, whether certified or authenticated copy of impugned order is filed? (Rule 9 of W.P. Rules)<br><br>a) If the proceedings have taken place before more than one authority, whether certified or authenticated copy of such orders is filed?<br>b) If petition is for issue of any other writ, whether the certified /authenticated copy of the order /notice / proceedings challenged is filed as required under Rule 10 of W.P. Rules?<br><br>ಅರ್ಜಿಯನ್ನು ಸರ್ಷಿಯೊರರಿ ರಿಟ್ ಹೊರಡಿಸಲು ಸಲ್ಲಿಸಲಾಗಿದ್ದರೆ, ಪ್ರಶ್ನಿತ ಆದೇಶದ ದೃಢೀಕೃತ ಅಥವಾ ಪ್ರಮಾಣೀಕೃತ ಪ್ರತಿಯನ್ನು ಸಲ್ಲಿಸಲಾಗಿದೆಯೇ? (ರಿಟ್ ಅರ್ಜಿ ನಿಯಮಗಳ ನಿಯಮ 9)<br><br>a) ನಡಾವಳಿಗಳು ಒಂದಕ್ಕಿಂತ ಹೆಚ್ಚು ಪ್ರಾಧಿಕಾರಗಳ ಮುಂದೆ ನಡೆದಿದ್ದರೆ, ಅಂತಹ ಆದೇಶಗಳ ದೃಢೀಕೃತ ಅಥವಾ ಪ್ರಮಾಣೀಕೃತ ಪ್ರತಿಯನ್ನು | | | | |

| | | | | | |
|---|---|---|---|---|---|
| | ಸಲ್ಲಿಸಲಾಗಿದೆಯೇ?<br>b) ಅರ್ಜಿಯು ಬೇರೆ ಯಾವುದೇ ರಿಟ್ ಹೊರಡಿಸಲು ಆಗಿದ್ದರೆ, ಪ್ರಶ್ನಿತ ಆದೇಶ / ಸೂಚನೆ / ನಡಾವಳಿಗಳ ದೃಢೀಕೃತ / ಪ್ರಮಾಣೀಕೃತ ಪ್ರತಿಯನ್ನು ಸಲ್ಲಿಸಲಾಗಿದೆಯೇ? (ರಿಟ್ ಅರ್ಜಿ ನಿಯಮಗಳ ನಿಯಮ 10 ರ ಅಡಿಯಲ್ಲಿ ಅಗತ್ಯವಿರುವಂತೆ) | | | | |
| 21. | Whether the relief & Interim relief is stated clearly and specifically by referring the correct Annexure and whether it tallies with Impugned Annexure?<br><br>ಪರಿಹಾರ ಮತ್ತು ಮಧ್ಯಂತರ ಪರಿಹಾರವನ್ನು ಸ್ಪಷ್ಟವಾಗಿ ಮತ್ತು ನಿರ್ದಿಷ್ಟವಾಗಿ ನಮೂದಿಸಲಾಗಿದೆಯೇ ಹಾಗೂ ಸರಿಯಾದ ಅನುಬಂಧವನ್ನು ಉಲ್ಲೇಖಿಸಲಾಗಿದೆಯೇ ಮತ್ತು ಅದು ಪ್ರಶ್ನಿತ ಅನುಬಂಧದೊಂದಿಗೆ ಹೊಂದಿಕೆಯಾಗುತ್ತದೆಯೇ? | | | | |
| 22. | Whether the petition involves constitutional validity of Central/ State Law as per Rule 2(4) of W.P. Rules?<br><br>ಈ ಅರ್ಜಿಯು ಕೇಂದ್ರ/ರಾಜ್ಯ ಕಾನೂನಿನ ಸಾಂವಿಧಾನಿಕ ಸಿಂಧುತ್ವದ ಪ್ರಶ್ನೆಯನ್ನು ಒಳಗೊಂಡಿದೆಯೇ? (ರಿಟ್ ಅರ್ಜಿ ನಿಯಮಗಳ ನಿಯಮ 2(4) ರ ಪ್ರಕಾರ) | | | | |
| 23. | (a) Whether the petition is signed by the petitioner or by his Advocate on every page of the petition as required by Rule 3 of W.P. Rules?<br>(b) Whether Advocate names are mentioned below their signatures in WP, Vakalath, IAs etc.? (Circular No. R(J) 73/2012 dated. 06.08.2012)<br><br>(a) ಅರ್ಜಿದಾರರು ಅಥವಾ ಅವರ ವಕೀಲರು ಅರ್ಜಿಯ ಪ್ರತಿ ಪುಟದ ಮೇಲೆ ಸಹಿ ಮಾಡಿದ್ದಾರೆಯೇ? (ರಿಟ್ ಅರ್ಜಿ ನಿಯಮಗಳ ನಿಯಮ 3 ರ ಪ್ರಕಾರ ಅಗತ್ಯವಿರುವಂತೆ) | | | | |

| | | | | | |
|---|---|---|---|---|---|
| | (b) ರಿಟ್ ಅರ್ಜಿ, ವಕಾಲತ್ತು, ಮಧ್ಯಂತರ ಅರ್ಜಿಗಳು ಇತ್ಯಾದಿಗಳಲ್ಲಿ ವಕೀಲರ ಸಹಿಗಳ ಕೆಳಗೆ ಅವರ ಹೆಸರುಗಳನ್ನು ನಮೂದಿಸಲಾಗಿದೆಯೇ? (ಸುತ್ತೋಲೆ ಸಂಖ್ಯೆ. ಆರ್(ಜೆ) 73/2012 ದಿನಾಂಕ. 06.08.2012 ರಂತೆ ) | | | | |
